ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೬

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ನಾಲ್ಕನೇ ಅಧಿವೇಶನ

## ಸೋಮವಾರ, ದಿನಾಂಕ: ೧೬ನೇ ಡಿಸೆಂಬರ್, ೨೦೨೪

---

### ಸಮೂಹ – I

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು
೨. ಇಂಧನ ಸಚಿವರು
೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು
೫. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು
೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
೭. ಉನ್ನತ ಶಿಕ್ಷಣ ಸಚಿವರು

---

### ವೈದ್ಯಕೀಯ ಶಿಕ್ಷಣ ಇಲಾಖೆಯ ಗ್ರೂಪ್–ಸಿ ವರ್ಗದ ಶುಶ್ರೂಷಾಧಿಕಾರಿಗಳಿಗೆ ಪದೋನ್ನತಿ ನೀಡುವ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೬ (೮೩೬) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೧೬ ವರ್ಷಗಳಿಂದ ಗ್ರೂಪ್–ಎ ಮತ್ತು ಗ್ರೂಪ್–ಬಿ ವರ್ಗದ ನೌಕರರನ್ನು ಹೊರತುಪಡಿಸಿ ಗ್ರೂಪ್–ಸಿ ವರ್ಗದ ಶುಶ್ರೂಷಾಧಿಕಾರಿಗಳಿಗೆ ಪದೋನ್ನತಿ ನೀಡಲಾಗುತ್ತಿದೆಯೇ ; ಇಲ್ಲವಾದಲ್ಲಿ ಕಾರಣವೇನು ; (ಸಂಪೂರ್ಣ ವಿವರ ನೀಡುವುದು)

(ಆ) ಪಿಸಿಸಿ (ಕ್ಯಾನ್ಸರ್ ಕೇಂದ್ರ) ಯಿಂದ ಸೇರ್ಪಡೆಯಾದ ಗ್ರೂಪ್–ಸಿ ಸಿಬ್ಬಂದಿಗಳು ಸುಮಾರು ೨೭ ವರ್ಷಗಳಿಂದ ಸೇವೆ ಸಲ್ಲಿಸಿ ಪದೋನ್ನತಿ ಹೊಂದದೆ ವಯೋ ನಿವೃತ್ತಿ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಸಂಪೂರ್ಣ ವಿವರಗಳನ್ನು ನೀಡುವುದು)

(ಇ) ಗ್ರೂಪ್–ಸಿ ನೌಕರರ ಪದೋನ್ನತಿಗೆ ಸಂಬಂಧಿಸಿದಂತೆ ಘನ ಉಚ್ಚ ನ್ಯಾಯಾಲಯದ ಆದೇಶಗಳ ಪ್ರತಿಯನ್ನು ಒದಗಿಸುವುದು ;

(ಈ) ನಿಯೋಜನೆ ಮೇಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಗಳನ್ನು ಉಚ್ಚ ನ್ಯಾಯಾಲಯದ ಆದೇಶವಾದರೂ ಸಹ ಮಾತೃ ಇಲಾಖೆಗೆ ಕಳುಹಿಸದೆ ವೈದ್ಯಕೀಯ ಶಿಕ್ಷಣ ವಿಭಾಗದಲ್ಲಿ ಮುಂದುವರೆಸುತ್ತಿರಲು ಕಾರಣಗಳೇನು ?

## ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಹಗಲಿನ ಸಮಯದಲ್ಲಿ ವಿದ್ಯುತ್ ಪೂರೈಸುವ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೭೭ (೭೩೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ರೈತರಿಗೆ ರಾತ್ರಿ ಸಮಯದಲ್ಲಿ ಜಮೀನುಗಳಿಗೆ ನೀರನ್ನು ಹಾಯಿಲು ವಿದ್ಯುತ್ ಪೂರೈಸಲು ಸಮಯ ನಿಗದಿ ಮಾಡಿದ್ದು, ಇದನ್ನು ಬದಲಾಯಿಸಿ ಹಗಲಿನ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡದಿರುವುದಕ್ಕೆ ಕಾರಣವೇನು; ರಾತ್ರಿ ಸಮಯದಲ್ಲಿ ವಿಷಜಂತುಗಳ ಕಾಟ, ದೂರದ ಜಮೀನಿನ ತೊಂದರೆ, ಸಮಯದ ಕೊರತೆ ಇನ್ನು ಇತ್ಯಾದಿ ಸಮಸ್ಯೆಯಿಂದ ರೈತರು ರಾತ್ರಿ ಸಮಯದಲ್ಲಿ ಜಮೀನುಗಳಿಗೆ ನೀರು ಹಾಯಿಸಲು ಹೋಗಲು ವಿಫಲರಾಗುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಹಗಲಿನ ಸಮಯದಲ್ಲಿ ವಿದ್ಯುತ್ ಪೂರೈಸಲು ಕ್ರಮ ಕೈಗೊಳ್ಳುವುದೇ;

(ಆ) ರಾಜ್ಯದ ರೈತರುಗಳು ಕಷ್ಟಪಟ್ಟು ಬೆಳೆದ ಪ್ರತಿಯೊಂದು ಬೆಳಗೂ ಸರಿಯಾದ ಬೆಂಬಲ ಬೆಲೆ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯದ ಆಯಾ ಪ್ರದೇಶಕ್ಕನುಗುಣವಾಗಿ ರೈತರು ಬೆಳೆಗಳನ್ನು ಬೆಳೆಯುತ್ತಿದ್ದು, ಅವರನ್ನು ಪ್ರೋತ್ಸಾಹಿಸಲು, ಅವರು ಬೆಳೆಯುವ ಬೆಳೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

(ಈ) ರಾಜ್ಯದ ರೈತರಿಗೆ ಸಹಾಯಧನ ರೂಪದಲ್ಲಿ ಅವರಿಗೆ ಉಚಿತ ಬೀಜಗಳು ಮತ್ತು ರಸಗೊಬ್ಬರಗಳನ್ನು ವಿತರಿಸಿ, ಬಿತ್ತನೆ ಮತ್ತು ಬೀಜೋಪಚಾರಗಳನ್ನು ಮಾಡುವ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಬಗ್ಗೆ ಸರ್ಕಾರವು ಚಿಂತನೆಯನ್ನು ನಡೆಸಿದೆಯೇ ?

## ಭ್ರೂಣ ಹತ್ಯೆಗಳನ್ನು ತಡೆಯುವ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು)** –

೭೮ (೭೮೦) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಭ್ರೂಣ ಹತ್ಯೆ ಪ್ರಕರಣಗಳು ಜಾಸ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಜಿಲ್ಲಾವಾರು ಮಾಹಿತಿ ನೀಡವುದು ;

(ಆ) ರಾಜ್ಯದಲ್ಲಿ ಸರ್ಜರಿ ಮೂಲಕ ಹೆರಿಗೆಗಳಾಗುತ್ತಿರುವ ಶೇಕಡ ಪ್ರಮಾಣ ಎಷ್ಟು; ಅನಗತ್ಯ ಸರ್ಜರಿ ನಡೆಯುವ ಹೆರಿಗೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರಿಸುವುದು)

(ಇ) ಇಲ್ಲಿಯವರೆಗೆ ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಭಾಗಿಯಾದವರ ಸಂಖ್ಯೆ ಎಷ್ಟು; ಇವರುಗಳ ವಿರುದ್ಧ ತೆಗೆದುಕೊಂಡ ಕ್ರಮಗಳೇನು ;

(ಈ) ರಾಜ್ಯದಲ್ಲಿ ಭ್ರೂಣ ಹತ್ಯೆ ತಡೆಗಟ್ಟಲು ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು? (ವಿವರಿಸುವುದು)

## ರಾಜ್ಯದಲ್ಲಿ ಹಸಿರು ಇಂಧನ ಯೋಜನೆಯ ಅನುಷ್ಠಾನದ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)** –

೭೯ (೮೫೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರ 'ಹಸಿರು ಇಂಧನ' ಬಗ್ಗೆ ನೀತಿ ರೂಪಿಸಿದೆಯೇ ; ಮತ್ತು ರಾಜ್ಯದಲ್ಲಿ ಈ ಯೋಜನೆ ಅಡಿ ಕೈಗೊಂಡಿರುವ ಅಂಶಗಳು ಯಾವುವು ;

ಮತ್ತು ಉತ್ಪಾದಿಸುತ್ತಿರುವ ಹಸಿರು ಇಂಧನದ ಸಾಮರ್ಥ್ಯವೆಷ್ಟು ; ಹಾಗೂ ಕೇಂದ್ರ ಸರ್ಕಾರದಿಂದ ದೊರೆಯುವ ಆರ್ಥಿಕ ಮತ್ತ ಇತರೆ ನೆರವುಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ಇಂಧನ ಮಂತ್ರಾಲಯದ ವತಿಯಿಂದ ರೂಪಿಸಿರುವ ಹಸಿರು ಇಂಧನ ಕಾರಿಡಾರ್ (Green Energy Corrider)ನ್ನು ಅನುಷ್ಠಾನಗೊಳಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯ ರೂಪು–ರೇಷೆಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಉತ್ಪಾದಿಸಿದ 'ಹಸಿರು ಇಂಧನ' ವನ್ನು ಜಲ–ಕಲ್ಲಿದ್ದಲುಗಳಿಂದ ಉತ್ಪಾದಿಸಿದ ವಿದ್ಯುತ್ಶಕ್ತಿ ಹರಿಯುವ ಗ್ರಿಡ್‌ಗಳೊಂದಿಗೆ ಜೋಡಿಸಲು ಹಲವಾರು ಸಮಸ್ಯೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ಈ ಎರಡು ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದಿರುವ ಆರ್ಥಿಕ ನೆರವು ಮತ್ತು ಇತರೆ ಸಲವತ್ತುಗಳು ಯಾವುವು ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಕ್ಯಾನ್ಸರ್ ಚಿಕಿತ್ಸೆ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮೦ (೮೮೦) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕ್ಯಾನ್ಸರ್ ಚಿಕಿತ್ಸೆಯನ್ನು ಜನಸಾಮಾನ್ಯರ ಕೈಗೆಟುಕುವಂತೆ ಮಾಡಲು ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ ; (ಅದರ ವಿವರಗಳನ್ನು ನೀಡುವುದು)

(ಆ) ರಾಜ್ಯದಲ್ಲಿ ಕ್ಯಾನ್ಸರ್‌ನ ವಿವಿಧ ಪ್ರಕಾರಗಳು, ವಯಸ್ಸಿನ ಗುಂಪುಗಳು ಮತ್ತು ಸಂಭವಿಸುವಿಕೆಯ ಕುರಿತು ಸರ್ಕಾರವು ಅಧ್ಯಯನವನ್ನು ನಡೆಸಿದೆಯೇ ; (ಅದರ ವಿವರಗಳನ್ನು ನೀಡುವುದು)

(ಇ) ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲ್ಲೂಕು ಆಸ್ಪತ್ರೆಗಳು ಮಾರಣಾಂತಿಕ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಎಲ್ಲಾ ಉಪಕರಣಗಳನ್ನು ಹೊಂದಿವೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಮೂಲಸೌಕರ್ಯಗಳ ಕೊರತೆಯನ್ನು ಸರ್ಕಾರ ಗಮನಿಸಿದೆಯೇ ? (ವಿವರಗಳನ್ನು ನೀಡುವುದು)

## ಗ್ರಂಥಾಲಯ ಇಲಾಖೆಗೆ ಸಂಬಂಧಿಸಿದ ಪ್ರಶ್ನೆ ಕುರಿತು

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) –**

೮೧ (೮೮೭) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಾರ್ವಜನಿಕ ಗ್ರಂಥಾಲಯ ಕಾಯ್ದೆ ೧೯೬೫ನ್ನು ತಿದ್ದುಪಡಿ ಮಾಡಲಾಗಿದೆಯೇ; ಕನ್ನಡ ಪುಸ್ತಕಗಳ ಖರೀದಿಗೆ ಮೀಸಲಿರಿಸಿರುವ ಅನುದಾನ ಮತ್ತು ವೆಚ್ಚವಾದ ಮೊತ್ತ ಹಾಗೂ ಬಾಕಿ ಮೊತ್ತ ಎಷ್ಟು ಮತ್ತು ಕೈಗೊಂಡ ಕ್ರಮಗಳೇನು ; ಗ್ರಂಥಾಲಯದಲ್ಲಿ ಆಯುಕ್ತಾಲಯ ಸೃಜನೆ ಕಾಯ್ದೆಯಲ್ಲಿ ಇದೆಯೇ ; ಹಾಗಿದ್ದಲ್ಲಿ, ದಾಖಲೆ ಒದಗಿಸುವುದು ;

(ಆ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಪುಸ್ತಕಗಳು ಖರೀದಿಯ ವಿವಿಧ ಯೋಜನೆಗಳಾವುವು ; (೧. ಏಕ ಗವಾಕ್ಷಿ, ೨. ಆರ್.ಆರ್.ಎಲ್.ಎಫ್ ಮತ್ತು ೩. ಎಸ್.ಸಿ.ಪಿ.ಟಿ.ಎಸ್.ಪಿ ಯೋಜನೆ) ಬಗ್ಗೆ ವಿವರ ನೀಡುವುದು ;

(ಇ) ಕನ್ನಡ ಪುಸ್ತಕಗಳ ಪುಟವಾರು ಬೆಲೆ ಏರಿಕೆ ೨೦೧೭ ರಿಂದ ಪರಿಷ್ಕರಣೆ ಆಗದೆ ವಿವಿಧ ಅಳತೆಯ ಪುಸ್ತಕಗಳ ಬೆಲೆ ನಿಗಧಿ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಈ) ಸಾರ್ವಜನಿಕ ಗ್ರಂಥಾಲಯ ಕರ ಸಂದಾಯವಾಗದೆ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಿಂದ ಗ್ರಂಥಾಲಯ ಬಾಕಿ ಕರ ಎಷ್ಟಿದೆ ; ವಸೂಲಿಗಾಗಿ ಕೈಗೊಂಡ ಕ್ರಮಗಳೇನು ; ಪ್ರಸಕ್ತ ವರ್ಷ ಯಾವ ವರ್ಷದಲ್ಲಿ ಪ್ರಕಟವಾದ ಪುಸ್ತಕಗಳ

ಆಯ್ಕೆ ನಡೆದಿದೆ ; ಇದರಲ್ಲಿ ಆಯ್ಕೆ ಮತ್ತು ತಿರಸ್ಕೃತವಾದ ಪುಸ್ತಕಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಉ) ಮೆ: ಅಕ್ನಾ ಟೆಕ್ನಾಲಜಿ ಸಂಸ್ಥೆಯಿಂದ ಇಲಾಖೆಗೆ ಖರೀದಿಸಲಾಗಿರುವ ಗಣಕಯಂತ್ರ ಹಾಗೂ ಮತ್ತಿತರೆ ಎಲಾಕ್ಟ್ರಾನಿಕ್ ಉಪಕರಣಗಳಾವುವು ? (ಜಿಲ್ಲಾವಾರು/ನಗರವಾರು ಹಾಗೂ ಶಾಲಾ ಕಾಲೇಜುವಾರು ಮಾಹಿತಿ ಒದಗಿಸುವುದು)

## ವರ್ಗಾವಣೆ ಪ್ರಕ್ರಿಯೆ GPT ಮತ್ತು TGT ಬಗ್ಗೆ ಮಾಹಿತಿ ಒದಗಿಸುವ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೮೨ (೭೮೩+೭೭೫) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೪–೧೫ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ಜಿ.ಪಿ.ಟಿ. ಶಿಕ್ಷಕರ ಸಂಖ್ಯೆ ಎಷ್ಟು ; ಹಾಗೂ ಟಿ.ಜಿ.ಟಿ. ಶಿಕ್ಷಕರ ಸಂಖ್ಯೆ ಎಷ್ಟು ;

(ಆ) ಜಿ.ಪಿ.ಟಿ. ಶಿಕ್ಷಕರು ಮತ್ತು ಟಿ.ಜಿ.ಟಿ. ಶಿಕ್ಷಕರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆಯೇ ; ತಾರತಮ್ಯವಾಗಿದ್ದಲ್ಲಿ, ಅದಕ್ಕೆ ಇರುವ ಕಾರಣಗಳೇನು ;

(ಇ) ಟಿ.ಜಿ.ಟಿ. ಶಿಕ್ಷಕರಿಗೆ ಮೊದಲ ಪ್ರಾತಿನಿಧ್ಯವಾಗದ್ದರೆ, ಜಿ.ಪಿ.ಟಿ. ಶಿಕ್ಷಕರಿಗೆ ಪ್ರಾತಿನಿಧ್ಯ ನೀಡದಿರಲು ಕಾರಣವೇನು ;

(ಈ) ಇತ್ತೀಚಿನ ವರ್ಗಾವಣೆಯಲ್ಲಿ ರಾಜ್ಯದಲ್ಲಿ ಟಿ.ಜಿ.ಟಿ. ಶಿಕ್ಷಕರಿಗೆ ಹಾಗೂ ಜಿ.ಪಿ.ಟಿ. ಶಿಕ್ಷಕರಿಗೆ ಎಷ್ಟು ಅವಕಾಶ ಕಲ್ಪಿಸಲಾಗಿದೆ ; (ಮಾಹಿತಿ ನೀಡುವುದು)

(ಉ) ೨೦೧೬ರ ಪೂರ್ವದಲ್ಲಿ ೧ ರಿಂದ ೭ನೇ ತರಗತಿಗಳಿಗೆ ನೇಮಕಗೊಂಡ P.S.T. ವೃಂದದ ಶಿಕ್ಷಕರಿಗೆ G.P.T. (೬–೮) ವೃಂದಕ್ಕೆ ಬಡ್ತಿ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿ ಇದೆ ; (ಮಾಹಿತಿ ನೀಡುವುದು) ; ಈ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ಉನ್ನತ ಮಟ್ಟದ ಸಮಿತಿ ರಚನೆ ಆಗಿದ್ದು, ಸದರಿ ಸಮಿತಿ ವರದಿ ಸಲ್ಲಿಸಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩ (೮೦೨) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಭರ್ತಿ ಮಾಡಿಕೊಳ್ಳಲಾದ ಹುದ್ದೆಗಳ ಸಂಖ್ಯೆ ಎಷ್ಟು ; ಈ ಹುದ್ದೆಗಳಲ್ಲಿ ಮಂಜೂರಾದ ಹಾಗೂ ಖಾಲಿಯಿರುವ ವಿವಿಧ ಹುದ್ದೆಗಳೆಷ್ಟು ; (ವಿವರವನ್ನು ನೀಡುವುದು)

(ಆ) ಈ ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಸೂಕ್ತ ಪ್ರಮಾಣದಲ್ಲಿ ಚಿಕಿತ್ಸೆ ನೀಡಲು ಅಡಚಣೆ ಉಂಟಾಗುವುದಿಲ್ಲವೇ ;

(ಇ) ಹಾಗಿದ್ದಲ್ಲಿ, ಪ್ರಸ್ತುತ ಖಾಲಿಯಿರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗುವುದು ? (ಮಾಹಿತಿಯನ್ನು ಒದಗಿಸುವುದು)

## ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕರೆಂದು ಪದನಾಮೀಕರಿಸುವ ಬಗ್ಗೆ

**ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) –**

೮೪ (೭೬೨) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೬ರ ಪೂರ್ವದಲ್ಲಿ ೬ ರಿಂದ ೭ ಮತ್ತು ೮ನೇ ತರಗತಿಗೆ ನೇಮಕವಾಗಿದ್ದ ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಹಿಂದಿ (ಪಿ.ಎಸ್.ಟಿ ಹಿಂದಿ) (೧ ರಿಂದ ೫ನೇ ತರಗತಿ) ಶಿಕ್ಷಕರೆಂದು ಪದನಾಮೀಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪಿ.ಯು.ಸಿ. ಟಿ.ಸಿ.ಹೆಚ್./ಡಿ.ಎಡ್. ವಿದ್ಯಾರ್ಹತೆಯ ಮೇಲೆ ನೇಮಕವಾಗಿರುವ ಪ್ರಾಥಮಿಕ ಶಾಲಾ ಹಿಂದಿ (ಪಿ.ಎಸ್.ಟಿ–ಹಿಂದಿ) (೧ ರಿಂದ ೫ನೇ ತರಗತಿ) ಶಿಕ್ಷಕರನ್ನು ೬–೮ನೇ ತರಗತಿಗಳಿಗೆ ಬೋಧನೆ ಮಾಡಲು ಸೂಚಿಸಿರುವುದು

ಶಿಕ್ಷಣ ಹಕ್ಕು ಕಾಯಿದೆ–೨೦೦೯ ಮತ್ತು ಎನ್.ಸಿ.ಟಿ.ಇ. ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆಯಲ್ಲವೇ ;

(ಇ) ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕ (೧ ರಿಂದ ೫ನೇ ತರಗತಿ) ರ ಮತ್ತು ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕ (೧ ರಿಂದ ೫ನೇ ತರಗತಿ)ರ ಮೂಲ ವಿದ್ಯಾರ್ಹತೆಯೇನು ;

(ಈ) ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕ (೧ ರಿಂದ ೫ನೇ ತರಗತಿ)ರನ್ನು ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕ (೧ ರಿಂದ ೫ನೇ ತರಗತಿ) ರಂದು ಪದನಾಮೀಕರಿಸಲು ಯಾವ ನಿಯಮಗಳಲ್ಲಿ ಅವಕಾಶವಿದೆ ; (ನಿಯಮಗಳನ್ನು ತಿಳಿಸಿವುದು)

(ಉ) ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕ (೧ ರಿಂದ ೫ನೇ ತರಗತಿ)ರನ್ನು ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕ (೧ ರಿಂದ ೫ನೇ ತರಗತಿ) ರನ್ನು ಪದನಾಮೀಕರಿಸಲು ಯಾವ ನಿಯಮಗಳಲ್ಲಿ ಅವಕಾಶ ಇರುವುದಿಲ್ಲವೆಂದು ಇರುವ ನಿಯಮಗಳನ್ನು ತಿಳಿಸುವುದು ?

## ವಿದ್ಯುತ್ ಇಲಾಖೆಗಳ ವ್ಯವಸ್ಥೆಯಲ್ಲಿನ ಹಾನಿಯ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೮೫ (೭೮೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಸ್ತುತ ಸಾಲಿನಲ್ಲಿ ಬಿದ್ದ ಮಳೆಯ ಪರಿಣಾಮವಾಗಿ ವಿದ್ಯುತ್ ಇಲಾಖೆಯ ವ್ಯವಸ್ಥೆಯಲ್ಲಿ ಎಷ್ಟು ಪ್ರಮಾಣ ಹಾನಿಗೀಡಾಗಿದೆ ; (ಎಸ್ಕಾಂಗಳವಾರು ವಿವರ ಒದಗಿಸುವುದು)

(ಆ) ಹಾನಿಗೆ ಒಳಪಟ್ಟ ವಸ್ತು ಹಾಗೂ ಸಾಮಗ್ರಿಗಳು ಯಾವುವು ಮತ್ತು ಇದಕ್ಕೆ ತಗುಲಿದ ವೆಚ್ಚವೆಷ್ಟು ಹಾಗೂ ಇದರ ಮೌಲ್ಯಮಾಪನ ಯಾವ ರೀತಿ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ಹಾನಿಗಳನ್ನು ಸರಿಪಡಿಸಲು ತಗುಲಿದ ವೆಚ್ಚವೆಷ್ಟು ; (ವಿವರ ಒದಗಿಸುವುದು)

(ಈ) ಮಳೆಯ ಪರಿಣಾಮಗಳಿಗೆ ವ್ಯವಸ್ಥೆ ಹಾಳಾಗದಂತೆ ನಿರ್ವಹಣೆ ಮಾಡಲು ನೇಮಿಸಲ್ಪಟ್ಟ ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; (ವಿವರ ಒದಗಿಸುವುದು)

(ಉ) ಈ ರೀತಿಯ ಪರಿಣಾಮಗಳನ್ನು ಎದುರಿಸಲು ಸಮರ್ಥವಾಗುವಂತೆ ವ್ಯವಸ್ಥೆಯನ್ನು ನಿರ್ಮಿಸಲು ಕಾರಣಗಳನ್ನು ಗುರುತಿಸಿ ಅಗತ್ಯವಿರುವ ಕ್ರಮಗಳ

ಬಗ್ಗೆ ವರದಿ ಸಲ್ಲಿಸಲು ತಜ್ಞ ಸಮಿತಿಯನ್ನು ಸರ್ಕಾರ ರಚಿಸುವುದೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ರಚಿಸಲಾಗುವುದು ? (ಸಂಪೂರ್ಣ ಮಾಹಿತಿ ಒದಗಿಸುವುದು)

**ಹೊಸದಾಗಿ ವಿದ್ಯುತ್ ಸ್ಥಾವರ ನೀಡುವ ಮತ್ತು ದುರಸ್ಥಿಗೊಳಿಸುವ ಬಗ್ಗೆ**

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬ (೮೭೮) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕೃಷಿ, ಗೃಹ, ಬೋರ್‌ವೆಲ್ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಇತರೆ ಉಪಯೋಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ನೀಡಲು ಇರುವ ಮಾನದಂಡಗಳೇನು ;

(ಆ) ಕೃಷಿ/ಗೃಹ/ವಾಣಿಜ್ಯ ವಿಭಾಗದ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೈಗೊಳ್ಳಲು ಇರುವ ಮಾರ್ಗಸೂಚಿಗಳಾವುವು ;

(ಇ) ಟ್ರಾನ್ಸ್‌ಫಾರ್ಮರ್ ದುರಸ್ತಿಗೊಳಿಸಲು ರೈತರಿಂದ ಹಣ ಪಡೆಯುತ್ತಿರುವ ಬಗ್ಗೆ ಎಷ್ಟು ದೂರುಗಳು ಸ್ವೀಕೃತವಾಗಿವೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಗೃಹ ಲಕ್ಷ್ಮಿ ಯೋಜನೆಯಡಿ ಎಷ್ಟು ಫಲಾನುಭವಿಗಳು ಆಯ್ಕೆಯಾಗಿದ್ದಾರೆ ; ಮತ್ತು ಉಚಿತ ವಿದ್ಯುತ್ ಬಿಲ್ ಮೊತ್ತವನ್ನು ಸರ್ಕಾರಕ್ಕೆ ಎಷ್ಟು ಪಾವತಿಸಲಾಗಿದೆ? (ವಿವರ ನೀಡುವುದು)

**ಕೋಲಾರ ಜಿಲ್ಲೆಯಲ್ಲಿ ನಕಲಿ ವೈದ್ಯರು ಹೆಚ್ಚಾಗಿರುವ ಬಗ್ಗೆ**

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮೭ (೭೨೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೋಲಾರ ಜಿಲ್ಲೆಯಲ್ಲಿ ನಕಲಿ ವೈದ್ಯರು, ಅಕ್ರಮ ಕ್ಲಿನಿಕ್‌ಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಕಲಿ ವೈದ್ಯರ ಕ್ಲಿನಿಕ್‌ಗಳ ವಿರುದ್ಧ ಕರ್ನಾಟಕ ಖಾಸಗಿ ಸಂಸ್ಥೆ ಕಾಯ್ದೆ (ಕೆಪಿಎಂಇ) ಅನ್ವಯ ಕ್ರಮ ಕೈಗೊಳ್ಳಬೇಕೆಂಬ ನಿಯಮ ಇದೆಯೇ ;

(ಇ) ಕೋಲಾರ ಜಿಲ್ಲೆಯಲ್ಲಿ ಎಷ್ಟು ನಕಲಿ ವೈದ್ಯರನ್ನು ಹಾಗೂ ಅಕ್ರಮ ಕ್ಲಿನಿಕ್‌ಗಳನ್ನು ಸರ್ಕಾರ ಪತ್ತೆಹಚ್ಚಿದೆ ; ಅದರಲ್ಲಿ ಎಷ್ಟು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ;

(ಈ) ನಕಲಿ ವೈದ್ಯರ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರ ಜಾರಿಗೊಳಿಸಿರುವ ಹೊಸ ಮಸೂದೆಯಂತೆ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇರುವ ತೊಂದರೆ ಏನು;

(ಉ) ಕ್ಲಿನಿಕ್‌ಗಳನ್ನು ಪ್ರಾರಂಭಿಸಲು ಸರ್ಕಾರ ರೂಪಿಸಿರುವ ನೀತಿ ನಿಯಮಗಳೇನು; ನಿಯಮದ ವಿರುದ್ದ ನಡೆಸುತ್ತಿರುವ ಕ್ಲಿನಿಕ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಲು ಜಿಲ್ಲೆಯಲ್ಲಿ ಯಾವ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ?

## ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೮೮ (೮೨೨) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಖಾಲಿ ಹುದ್ದೆಗಳೆಷ್ಟು ; (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)

(ಆ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ನಿಗದಿಪಡಿಸಿರುವ ಷರತ್ತುಗಳು ಏನು ; ಹಾಗೂ ಇವು ಯಾವುವು ;

(ಇ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸರ್ಕಾರ ನಿಗದಿಪಡಿಸಿರುವ ವಿದ್ಯಾರ್ಥಿಗಳ ದಾಖಲಾತಿಯನ್ನು ಕಡಿಮೆ ಮಾಡಿ ಈ ಖಾಲಿ ಇರುವ ಉಪನ್ಯಾಸಕರ ಹಾಗೂ ಇತರೆ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ?

## ಆರ್.ಟಿ.ಇ. ಕಾಯ್ದೆಯ ಬಗ್ಗೆ

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯ (೮೦೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಆರ್‌ಟಿಇ ಕಾಯ್ದೆಯ ಉದ್ದೇಶವೇನು ; ಆರ್‌ಟಿಇ ಕಾಯ್ದೆಯಡಿಯಲ್ಲಿ ವಿದ್ಯಾರ್ಥಿಗಳ ಆಯ್ಕೆ ಯಾವ ರೀತಿ ನಡೆಯುತ್ತದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಆರ್‌ಟಿಇ ಕಾಯ್ದೆಯ ಅನುಷ್ಠಾನದಿಂದ ೧ ರಿಂದ ೮ನೇ ತರಗತಿಯವರೆಗೆ ಪ್ರವೇಶ ಶುಲ್ಕವನ್ನು ಸರ್ಕಾರವೇ ನೀಡುತ್ತಿದ್ದು, ೮ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ವರೆಗೂ ಈ ಯೋಜನೆಯನ್ನು ವಿಸ್ತರಿಸುವುದರಿಂದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಬಡ ಮಕ್ಕಳಿಗೆ ಅನುಕೂಲವಾಗಲಿದ್ದು, ಸರ್ಕಾರವು ಈ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಚಿಂತಿಸಿದೆಯೇ ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ವಿಸ್ತರಿಸಲಾಗುವುದು ;

(ಇ) ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯ ಕ್ರಮವನ್ನು ಅಳವಡಿಸದಿರಲು ಕಾರಣವೇನು ; ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಇಲ್ಲದೇ ಇರುವುದರಿಂದ ಆರ್‌ಟಿಇ ಕಾಯ್ದೆಯಡಿ ಬಡ ಮಕ್ಕಳು ಖಾಸಗಿ ಶಾಲೆಗಳಿಗೆ ದಾಖಲಾಗುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿಯೂ ಸಿಬಿಎಸ್‌ಇ ಪಠ್ಯಕ್ರಮ ಜಾರಿಗೊಳಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ದಿನಾಂಕ: ೦೧.೦೪.೨೦೦೬ರ ಹಿಂದೆ ಅರ್ಜಿ ಸಲ್ಲಿಸಿ ನೇಮಕವಾಗಿದ್ದ ಬೋಧಕ-ಬೋಧಕೇತರರಿಗೆ ಹಳೆ ಪಿಂಚಣಿ ಯೋಜನೆ ನೀಡುವ ಕುರಿತು

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೯೦ (೭೪೫) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಿನಾಂಕ: ೦೧.೦೪.೨೦೦೬ರ ಹಿಂದೆ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ನಂತರದ ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು ವಿವಿಧ ಹುದ್ದೆಗಳಿಗೆ ಸೇರ್ಪಡೆಯಾಗಿ ವಿಶ್ವವಿದ್ಯಾಲಯಗಲ್ಲಿ ಯು.ಜಿ.ಸಿ. ವೇತನ ಪಡೆದು ಕಾರ್ಯನಿರ್ವಹಿಸುತ್ತಿರುವ ಬೋಧಕ-ಬೋಧಕೇತರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡದಿರಲು ಕಾರಣಗಳೇನು ; (ವಿವರ ನೀಡುವುದು)

(ಆ) ಆರ್ಥಿಕ ಇಲಾಖೆಯು ದಿನಾಂಕ: ೨೪.೦೧.೨೦೨೪ರಂದು ಹೊರಡಿಸುವ ಆದೇಶದಲ್ಲಿ ದಿನಾಂಕ: ೦೧.೦೪.೨೦೦೬ರ ಪೂರ್ವದಲ್ಲಿ ಅರ್ಜಿ ಸಲ್ಲಿಸಿ, ನಂತರ ಹಲವಾರು ಇಲಾಖೆಗಳಲ್ಲಿ ವಿವಿಧ ಹುದ್ದೆಗಳಿಗೆ ಸೇರ್ಪಡೆಯಾಗಿರುವವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡಲಾಗುತ್ತಿದೆ ;

(ಇ) ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಜಿ.ಸಿ. ವೇತನ ಪಡೆಯುತ್ತಿರುವ ಪ್ರಾಧ್ಯಾಪಕರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಿ, ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಅನ್ವಯಿಸುವುದಿಲ್ಲವೆಂದು ಆರ್ಥಿಕ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆಯೇ ; (ವಿವರ ನೀಡುವುದು)

(ಈ) ರಾಜ್ಯದ ವಿವಿಧ ಸರ್ಕಾರಿ ವಿಶ್ವವಿದ್ಯಾಲಯಗಳಿಂದ ಅರ್ಹ ಬೋಧಕ-ಬೋಧಕೇತರರಿಗೆ ಆರ್ಥಿಕ ಇಲಾಖೆಯ ಅಧಿಸೂಚನೆಯನ್ವಯ ಪದವಿ ಕಾಲೇಜಿನ ಅಧ್ಯಾಪಕರಿಗೆ ಹಳೆ ಪಿಂಚಣಿ ಸೌಲಭ್ಯ ನೀಡಿ ವಿಶ್ವವಿದ್ಯಾಲಯದ ನೌಕರರಿಗೆ ನೀಡದಿರಲು ಕಾರಣಗಳೇನು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.862/ಪಿ7

List of Questions
for Oral Answers

Total No. of
Questions - 15

# LIST - 06

# KARNATAKA LEGISLATIVE COUNCIL

## ONE HUNDRED AND FIFTY FOURTH SESSION

## Monday, the 16th December, 2024

### GROUP - I

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for Primary and Secondary Education
7. Minister for Higher Education

### PROVIDING PROMOTION FOR GROUP-C NURSING OFFICERS OF MEDICAL EDUCATION DEPARTMENT

**Sri Dinesh Gooligowda (Local Authorities Constituency) -**

76 (836) Will the Minister for Medical Education and Skill Development. be pleased to state:-

a) whether the promotion is being given for group C cadre of nursing officers excluding group A and group B cadre employees during the last 16 years; if not, the reasons for the same; (complete details be furnished)

b) whether it has come to the notice of the Government that the group C staff who have merged from PCC (cancer centre) are retiring without promotion despite serving 27 years; (complete details be furnished)

c) regarding the promotion of group-C employees, the orders copy of the Hon'ble High Court be furnished;

d) the reasons for continuation of the staff who are on deputation of the health and family welfare department in the medical education department without repatriating to the parent department even though there is an order of the Hon'ble High Court?

**POWER SUPPLY TO FARMERS DURING THE DAYTIME**

**Sri Nirani Hanamant Rudrappa (Graduates' Constituency) -**

77 (732) Will the Minister for Energy be pleased to state:-

a) the reasons for not supplying of power during the daytime instead of night time that has been fixed to the supply of power for flowing the water to the lands of farmers of the State; whether it has come to the notice of the Government that the farmers are being failed to flow the water to the lands during the night time due to the problems like trouble of venomous creature, distant land, shortage of time, etc's during the night time; if so, whether the step would be taken to supply of power during the daytime to facilitate farmers;

b) the measures taken by the Government to provide due support price for every crops that have been grown by the hard work of farmers of the State;

c) the farmers are growing the crops as per the suitability of the region of the State, the measures that have been taken by the Government with regard to provide the support for them by giving complete information about the crops that are growing by them;

d) whether the Government has contemplated with regard to creating awareness among the farmers regarding sowing and seed treatment by distributing free seeds and fertilizers to them in the form of subsidy for farmers of the State?

## REGARDING PREVENTION OF FOETICIDE

**Sri Jagadev Guttedar (Elected by Legislative Assembly) -**

78(780) Will the Minister for Health and Family Welfare be pleased to state:-

a) whether it has come to the notice of the Government that the foeticide cases are being increased in the State; if so, districtwise information be furnished;

b) the percentage of deliveries that are being carried out through the surgery in the State; the steps taken by the Government to control the deliveries explanation which have been occurred through unnecessary surgery; (explanation there of)

c) the number of persons who have involved in the foeticide cases so far; the action that has been taken against them;

d) the measures which have to be taken by the Government to avoid the foeticide in the State? (explanation there of)

## IMPLEMENTATION OF GREEN ENERGY SCHEME IN THE STATE

**Sri K.A. Thippeswamy (Nominated) -**

79 (859) Will the Minister for Energy be pleased to state:-

a) whether the policy has been framed by the State Government with regard to 'green energy'; and the particulars of facts that have been taken up under this scheme in the State; and the capacity of green energy that is being generated; and the particulars of financial and other assistance which are available from the Central Government; (complete information be furnished)

b) whether the green energy corridor which has been framed by the Ministry of energy of the Central

Government is being implemented in the State; if so, the particulars of outlines of the scheme; (complete information be furnished)

c) whether it has come to the notice of the Government that there are several problems to connect the grid used for transmission of electricity generated by hydro-coal to green energy which is generated in the State; if so, the particulars of steps taken by the Government to resolve the same; (complete information be furnished)

d) the particulars of financial assistance and other benefits that have been obtained from State the Government by the Central Government under these two schemes? (complete information be furnished)

## CANCER TREATMENT IN THE STATE

**Sri Nagaraju M. (Elected by Legislative Assembly) -**

80 (880) Will the Minister for Health and Family Welfare . be pleased to state:-

a) whether any scheme has been chalkedout by the Government for the cancer treatment to make affordable for common people in the State; (details there of be furnished)

b) whether the study has been conducted by the Government with regard to various types of cancers, age group and the occurrence of cancer in the State; (details be furnished)

c) whether all the district hospitals and taluk hospitals across the State are having all equipments to provide the treatment for the fatal diseases; (districtwise information be furnished)

d) whether the Government has noticed about the shortage of basic facilities in the Government hospitals of the State? (details be furnished)

## REGARDING LIBRARY DEPARTMENT

**Sri Adagur H. Vishwanath (Nominated) -**

81 (887) Will the Minister for Primary and Secondary Education be pleased to state:-

a) whether the Public Libraries Act, 1965 has been amended; the grant that has been earmarked for the purchase of kannada books and the amount that has been spent and the outstanding amount for the same and the particulars of steps taken there for; whether there is a provision in the Act to create the commissionerate of the library; if so, the document be furnished;

b) the particulars of various schemes for the purchase of books in the department of public libraries, (1.single window, 2. R.R.L.F and 3.S.C.P.T.S.P scheme) in this regard details be furnished;

c) whether it has come to the notice of the Government that the price has not been fixed for the different dimension of books without pagewise revision of price of kannada books since 2017; if so, the steps taken in this regard;

d) the details of arrears in the remittance of library cess by the various local bodies of the State; the steps taken for recovery of the same; the year in which the selection of published books that have been carried out in current year; out of which, the number of books that have been selected and rejected; (details be furnished)

e) the particulars of computer and other electronic equipments that have been purchased for the department from the AKNA technology private limited? (districtwise/citywise and schoolwise information be furnished)

## TRANSFER PROCESS OF G.P.T AND T.G.T

**Sri D.T. Srinivas (D.T.S.) (Teachers' Constituency) -**

**Sri Shashil G.Namoshi(Teachers' Constituency) -**

82 (783+775) Will the Minister for Primary and Secondary Education be pleased to state:-

a) the number of G.P.T and T.G.T teachers posts that have been sanctioned in the Government primary schools during the year 2024-25;

b) whether the provision has been provided to G.P.T teacher on par with T.G.T teachers; if not, the reasons there for;

c) if the first priority has been given to T.G.T teachers, the reasons for not giving the priority to G.P.T teachers;

d) the ratio of provision that has been provided to T.G.T and G.P.T teachers in the recent transfer in the State; (information be furnished)

e) the present stage of the process of issuance of promotion from P.S.T cadre teachers to G.P.T (6-8) cadre who have been appointed from 1st to 7th standards prior to 2016; (information be furnished) the high level committee has been constituted to submit the report by conducting the study in this regard, whether the report has been submitted by the committee? (detailed information be furnished)

## VACANT POSTS IN HEALTH DEPARTMENT

**Dr. M.G.Muley (Elected by Legislative Assembly) -**

83 (802) Will the Minister for Health and Family Welfare . be pleased to state:-

a) the number of posts that have been filled up by the health department in the State; out of those posts, the number of various posts that have been sanctioned and lying vacant; (details be furnished)

b) whether the impediments would not be caused to provide the treatment properly for the patients who are coming to the Government hospitals as these posts are lying vacant;

c) if so, the timelimit within which the current vacant posts would be filled up? (information be furnished)

## DESIGNATING OF PRIMARY SCHOOL HINDI TEACHERS AS PRIMARY SCHOOL GENERAL TEACHERS

**Dr. Chandrashekara Basavaraja Patil (Graduates' Constituency)-**

84 (762) Will the Minister for Primary and Secondary Education be pleased to state:-

a) whether it has come to the notice of the Government that the primary school assistant hindi teacher who have been appointed to 6th to 7th and 8th standard prior to 2016 have been designated as primary school hindi teacher (P.S.T Hindi) (from 1st to 5th standard);

b) the primary school hindi teacher (P.S.T Hindi) (from 1st to 5th standard) who have been appointed on the basis of PUC, TCH/D.ED qualification have been directed to teach for the 6th to 8th standard, whether it does caused violation of Right to Education Act, 2009 and N.C.T.E guidelines;

c) the of basic qualification of primary school hindi teacher (from 1st to 5th standard) and the primary school general teacher; (from 1st to 5th standard)

d) the particulars of rules in which the provision has been provided for designating primary school hindi teacher (from 1st to 5th standard) as primary school general teacher; (from 1st to 5th standard) (rules there of be explained)

e) the prevailing rules that have been stated that the particulars of rules in which there is no provision to

designating primary school hindi teacher (from 1st to 5th standard) as primary school general teacher? (from 1st to 5th standard)

## DAMAGES IN THE INFRASTRUCTURE OF ELECTRICITY DEPARTMENT

**Smt.Bharathi Shetty (Nominated) -**

85 (782) Will the Minister for Energy be pleased to state:-

a) the quantum of damage that has been caused in the infrastructure of electricity department due to the effect of rain fall in the current year; (escomswise details be furnished)

b) the particulars of items and materials that have been damaged and the cost incurred there for and the manner in which the evaluation has been carried out; (details be furnished)

c) the cost incurred to setright the damages; (details be furnished)

d) the particular of actions that have been taken against the contractors and engineers who have been appointed to prevent the infrastructure damages due to the effects of the rain; (details be furnished)

e) whether the expert committee would be constituted by the Government with regard to submission of the report about the necessary measures to be taken by identifying the reasons to make infrastructure as competent to face such situation; if so, the timelimit within which it would be constituted? (complete information be furnished)

## INSTALLATION OF NEW POWER PLANT AND REPAIR

**Sri H.S. Gopinath (Local Authorities Constituency) -**

86 (878) Will the Minister for Energy be pleased to state:-

a) the prevailing criterias to provide the new power connection for agriculture, domestic, borewell, commercial purpose and other purposes in the State;

b) the particulars of prevailing guidelines to repair the transformer of agriculture/domestic/commercial purpose;

c) the number of complaints that have been received with regard to the amount is being taken from the farmers to repair the transformer; (talukwise information be furnished)

d) the number of beneficiaries who have been selected under the Gruhalakshmi scheme; and the amount that has been paid by the Government for the free electricity bill? (details be furnished)

## FAKE DOCTORS INCREASED IN KOLAR DISTRICT

**Sri Govinda Raju (Elected by Legislative Assembly) -**

87 (721) Will the Minister for Health and Family Welfare . be pleased to state:-

a) whether it has come to the notice of the Government that the illegal clinics are functioning by the fake doctors in the Kolar district;

b) whether is there any rule regarding the action that would be taken against the clinics of fake doctors as per the Karnataka private medical establishments Act,(KPME);

c) the number of fake doctors and illegal clinics that have been traced out in the Kolar district; out of which, the number of cases in which the action that has been taken for the same;

d) the impediments for the Government to take stringent action as per the new bill which has been implemented by the Government to take the action against the fake doctors;

e) the rules and regulations that have been chalkedout by the Government for the commencement of clinics; the particulars of officers to whom the power has been entrusted to take the action against the clinics which are functioning against the rule in the district?

## FILL UP THE VACANT POSTS IN AIDED PRE-UNIVERSITY COLLEGES

**Sri S.L. Bhojegowda (Teachers' Constituency) -**

88 (822) Will the Minister for Primary and Secondary Education be pleased to state:-

a) the number of teaching and non-teaching posts that are lying vacant in aided pre-university colleges of the State; (talukwise complete information be furnished)

b) the conditions which have been prescribed by the Government to fill up the vacant posts which are lying vacant in aided pre-university colleges; and the particulars of the same;

c) the steps taken by the Government to fill up the posts of lecturers and other staff which are lying vacant by reducing the enrollment of students which has been prescribed by the Government in aided pre-university colleges?

## REGARDING R.T.E ACT

**Sri M.L.Anil Kumar (Local Authorities Constituency) -**

89 (804) Will the Minister for Primary and Secondary Education be pleased to state:-

a) the purpose of R.T.E Act; the manner in which the selection of students has been carried out under R.T.E Act; (complete information be furnished)

b) the admission fee is being provided by the Government from 1st standard to 8th standard since the implementation of R.T.E Act, if this scheme is extended

from 8th to 2nd puc, then it will be facilitating poor children of rural and urban areas, whether the Government has contemplated for the extension of this scheme; if not, the timelimit within which this scheme would be extended;

c) the reasons for not implementation of CBSE curriculum in the Government schools; since there is no CBSE curriculum in the Government schools, the poor children are being enrolled for the private schools under R.T.E Act, whether the Government has contemplated regarding implementation of CBSE curriculum also in the Government schools? (complete information be furnished)

**PROVIDING OLD PENSION SCHEME**

**Sri Puttanna (Teachers' Constituency) -**

90 (745) Will the Minister for Higher Education be pleased to state:-

a) the reason for not providing old pension scheme for teaching and non-teaching staff who are working in the universities by obtaining U.G.C salary after joining for various posts who have been submitted application for the posts prior to 01.04.2006 and completing recruitment process in later days; (details be furnished)

b) whether the order has been issued by the finance department on 24.01.2024 that the old pension scheme has been provided to the persons who applied before 01.04.2006 thereafter joined for various posts in several department;

c) whether the order has been issued by the finance department that the old pension scheme has not applicable for the employees who are working in the universities by implementing the old pension scheme for the professors who are working in the pre-university

colleges and the obtaining U.G.C salary; (details be furnished)

d) the reasons for not providing old pension facility for the employees of university while some of the professors of degree college and teaching and non-teaching staff from the various Government universities of State are eligible for the old pension scheme as per the notification of the finance department?

**K.R. MAHALAKSHMI**
Secretary
Karnataka Legislative Council

Government Press, Suvarna Vidhana Soudha camp, Belagavi - WD - - Copies